ಇ) ವಶಪಡಿಸಿಕೊಂಡ ವಾಹನಗಳು 306

ವಶಪಡಿಸಿಕೊಂಡ ವಾಹನಗಳನ್ನು ಅಬಕಾರಿ ಕಾಯಿದೆ 43 (ಎ) ಪ್ರಕಾರ ಮುಟ್ಟುಗೋಲು ಹಾಕಿಕೊಂಡು ಕಾನೂನು ಪ್ರಕಾರ ಹರಾಜು ಮುಖಾಂತರ ವಿಲೇಮಾಡಲಾಗುತ್ತಿದೆ.

**ರಾಜ್ಯದಾದ್ಯಂತ ನರ್ಸಿಂಗ್ ಶಾಲೆಗಳನ್ನು ಆರಂಭಿಸುವ ಬಗ್ಗೆ.**

537 - ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿ 1991-92ರ ಸಾಲಿನಲ್ಲಿ ನರ್ಸಿಂಗ್ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡಿರುವುದು ನಿಜವೇ?*

*ಆ) ಹಾಗಿದ್ದಲ್ಲಿ ಜಿಲ್ಲಾವಾರು ಹೆಸರು ಮತ್ತು ವಿಳಾಸ ಇವುಗಳೊಂದಿಗೆ ವಿವರ ನೀಡುವುದು?*

*ಇ) ಈ ಹೊಸದಾಗಿ ನರ್ಸಿಂಗ್ ಶಾಲೆಗಳನ್ನು ಆರಂಭಿಸಲು ಕಾರಣವೇನು?*

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಹೌದು.

ಆ)

1) ಕೃಪಾನಿಧಿ ಎಜುಕೇಷನ್ ಟ್ರಸ್ಟ್, ಕೋರಮಂಗಲ, ಬೆಂಗಳೂರು, ಬೆಂಗಳೂರು ಜಿಲ್ಲೆ.

2) ಶ್ರೀ ಆದಿಚುಂಚನಗಿರಿ ಎಜಕೇಷನ್ ಟ್ರಸ್ಟ್ ಚನ್ನರಾಯಪಟ್ಟಣ, ಹಾಸನ, ಹಾಸನ ಜಿಲ್ಲೆ.

3) ಶ್ರೀ ಆದಿಚುಂಚನಗಿರಿ, ಎಜುಕೇಷನ್ ಟ್ರಸ್ಟ್ ಬಾಲಗಂಗಾಧರನಾಥ ನಗರ, ಬೆಳ್ಳೂರು, ಮಂಡ್ಯ ಜಿಲ್ಲೆ.

4) ಹೈದ್ರಾಬಾದ್ ಕರ್ನಾಟಕ ಎಜುಕೇಷನ್ ಸೊಸೈಟಿ. ಗುಲ್ಬರ್ಗಾ, ಗುಲ್ಬರ್ಗಾ ಜಿಲ್ಲೆ

5) ಕೆ.ವಿ.ಜಿ. ಆಸ್ಪತ್ರೆ, ಸುಳ್ಯ, ದಕ್ಷಿಣ ಕನ್ನಡ ಜಿಲ್ಲೆ.

ಇ) ಸರ್ಕಾರದ ವತಿಯಿಂದ ಹೊಸ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡಲು ಕಾರಣವೇನೆಂದರೆ, ಶುಶ್ರೂಷಾ ಮಾನವಶಕ್ತಿಯನ್ನು ಹೆಚ್ಚಿಸಲು ಹಾಗೂ ರಾಜ್ಯದಲ್ಲಿನ ಆಸ್ಪತ್ರೆಗಳಿಗೆ ಅವಶ್ಯಕತೆಗಳನ್ನು ಪೂರೈಸಲು

**ಕೊಡಗು ಜಿಲ್ಲೆಯಲ್ಲಿ ಕಳ್ಳ ಸಾಗಾಣಿಕೆ ಮಾಡಿರುವವರ ಸಂಖ್ಯೆ**

529 - ಶ್ರೀಮತಿ ಸುಮಾ ವಸಂತ (ವೀರಾಜಪೇಟೆ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕೊಡಗು ಜಿಲ್ಲೆಯಲ್ಲಿ 1990 ರಿಂದ 1992 ನವೆಂಬರ್ ತಿಂಗಳಿನವರೆಗೆ ಕಳ್ಳಸಾಗಾಣಿಕೆ ಮಾಡಿರುವವರ ಸಂಖ್ಯೆ ಎಷ್ಟು?*

*ಆ) ಎಷ್ಟು ಕೆ.ಜಿ. ಶ್ರೀಗಂಧ ಮರ ವಶಪಡಿಸಿಕೊಳ್ಳಲಾಗಿದೆ.*

*ಇ) ವಶಪಡಿಸಿಕೊಂಡಿರುವ ಗಂಧದ ಮರದ ಮೊತ್ತವೆಷ್ಟು?*

*ಈ) ಈ ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಸರ್ಕಾರದವವು ಕೈಗೊಂಡ ಕ್ರಮ ಗಳೇನು?*